# ಪಾತ್ರ ಜನರನ್ನು ತಲುಪುವ ಖಾತ್ರಿ ಇರಬೇಕು

## ಶರ್ಮಿಳಾ ಚಂದ್ರಶೇಖರ್

ಉದಯ 'ಕನ್ಯಾದಾನ'ದ ಅರ್ಚನಾ



◆ **ನಟಿ ಆಗುವ ಸಂದರ್ಭ ಬಂದಿದ್ದು ಹೇಗೆ?**

ನಟಿ ಆಗಬೇಕು ಎನ್ನುವ ಬಯಕೆ ನನ್ನ ಕನಸಿನಲ್ಲಿಯೂ ಇರಲಿಲ್ಲ. ಕೂಚಿಪುಡಿ ನೃತ್ಯವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡುತ್ತಿದ್ದೆ. ಸುಮಾರು 685 ನೃತ್ಯ ಪ್ರದರ್ಶನಗಳನ್ನು ನೀಡಿದ್ದೇನೆ. ಒಮ್ಮೆ ನನ್ನ ಡಾನ್ಸ್ ನೋಡಿ 'ನಮ್ಮ ಅಮ್ಮ ಶಾರದೆ'ಯಲ್ಲಿ ನಟಿಸಲು ಕೇಳಿದರು. ಅದರಲ್ಲಿ ಚಿಕ್ಕ ಪಾತ್ರವನ್ನು ನಿರ್ವಹಿಸಿದೆ. ಅದು ಮುಗಿಯುವ ಮುನ್ನ ಉದಯದ 'ಸೀತಾ'ದಲ್ಲಿ ಅವಕಾಶ ಸಿಕ್ಕಿತು. ನಟಿ ಆಗಿದ್ದು ಅನಿವಾರ್ಯತೆಯಿಂದಲ್ಲ ಆಕಸ್ಮಿಕವಾಗಿ. ಕಿರುತೆರೆಗೆ ಬಂದ ಮೇಲೆ ಒಳ್ಳೆಯ ಪಾತ್ರಗಳು ಮತ್ತು ಹೆಚ್ಚಿನ ಜನಪ್ರಿಯತೆಯೂ ಸಿಕ್ಕಿದೆ. ನನ್ನಾಸೆಯ ನೃತ್ಯವನ್ನೂ ಇದರ ಜೊತೆ ಅಭ್ಯಾಸ ಮಾಡುತ್ತಿದ್ದೇನೆ. ಪ್ರತಿ ಪಾತ್ರಕ್ಕೂ ಮನ್ನಣೆ ಸಿಕ್ಕಿದೆ ಈ ಮೂಲಕ ಜನರನ್ನೂ ರಂಜಿಸುತ್ತಿದ್ದೇನೆ ಎಂದು ಖುಷಿಯಾಗಿಯೇ ಇದ್ದೇನೆ.

◆ **ನಿಮ್ಮ ಪರಿಚಯ ಹೇಳಿ.**

ನಮ್ಮೂರು ಬೆಂಗಳೂರು. ಅಪ್ಪ ಚಂದ್ರಶೇಖರ್, ಅಮ್ಮ ಶ್ರೀದೇವಿ. ಸಾಧಾರಣ ವ್ಯಾಪಾರಸ್ಥ ಕುಟುಂಬ ನಮ್ಮದು. ಲಕ್ಷ್ಮೀರಾಜಮಣಿ ಎನ್ನುವವರ ಬಳಿ 21 ವರ್ಷಗಳಿಂದ ಕೂಚಿಪುಡಿ ಅಭ್ಯಾಸ ಮಾಡಿದ್ದೇನೆ. 12 ವರ್ಷದಿಂದ ಕಿರುತೆರೆಗೆ ಬಂದಿದ್ದೇನೆ. ತೆಲುಗು ಮತ್ತು ಕನ್ನಡದ ಧಾರಾವಾಹಿಗಳಲ್ಲಿ ಅಭಿನಯಿಸಿದ್ದೇನೆ. ಈವರೆಗೆ ನಾಯಕಿ ಪಾತ್ರಗಳನ್ನೇ ನಿರ್ವಹಿಸುತ್ತಿದ್ದೇನೆ.

◆ **ಯಾವುದೇ ಪಾತ್ರವನ್ನು ಒಪ್ಪಲು ನಿಮ್ಮ ಮಾನದಂಡಗಳೇನು?**

ಹೊಸ ನಿರೀಕ್ಷೆಗಳೇನೂ ಇರುವುದಿಲ್ಲ. ಧಾರಾವಾಹಿ ಅಂದ ಮೇಲೆ ಸ್ತ್ರೀ ಪ್ರಧಾನ ಧೋರಣೆ ಇರುತ್ತವೆ. ಬಹುತೇಕರ ಜೀವನದಲ್ಲಿ ನಡೆಯುವ ಘಟನೆಗಳನ್ನೇ ರಂಜನೀಯವಾಗಿ ಕಲೆಗೆ ಒಗ್ಗಿಸುವ ಯತ್ನ ಮಾಡಲಾಗಿರುತ್ತದೆ. ನಾಯಕಿ ಪಾತ್ರಕ್ಕೆ ಅವಕಾಶ ಬಂದಿದ್ದರೂ ಆ ಬಗ್ಗೆ ವಿವರವನ್ನು ಸಾಮಾನ್ಯವಾಗಿ ಕೇಳುತ್ತೇನೆ. ಪಾತ್ರ ಜನರಿಗೆ ತಲುಪುತ್ತದೆ ಎನ್ನುವುದು ಖಾತ್ರಿ ಆಗಬೇಕು. ಇಲ್ಲಿ ಅರ್ಚನಾ ಆಗಿದ್ದೇನೆ. ಇದನ್ನು ನೋಡಿದ ಕೆಲವರಿಗಾದರೂ ಆಕೆ ಕೂಡ ನನ್ನಂತೆಯೇ ಅನುಭವಿಸುತ್ತಿದ್ದಾಳೆ ಎನ್ನುವ ಭಾವನೆ ಬರಬೇಕು. ನಾನು ತೆಗೆದುಕೊಳ್ಳುವ ನಿರ್ಧಾರಗಳು ಅವರ ನಿಜ ಜೀವನದಲ್ಲಿ ಸಹಾಯ ಆಗುವಂತೆ ಇರಬೇಕು. ಮೂಲತಃ ನನ್ನ ಪಾತ್ರ ನಮ್ಮ ಮನೆಯಲ್ಲಿ ಒಬ್ಬಳು ಎನ್ನುವಂತೆ ಇರಬೇಕು.

◆ **ಟೀವಿ ಅಂದರೆ ಅದೇ ಗೋಳಾಟ ಎಂದು ವೀಕ್ಷಕರು ದೂರುವುದು ಏಕೆ?**

ಜೀವನದಲ್ಲಿ ಇಲ್ಲದೆ ಇರುವುದನ್ನು ಟೀವಿಯಲ್ಲಿ ಏನೂ ತೋರಿಸುವುದಿಲ್ಲ. ನಮ್ಮ ಸಮಾಜ ಎಷ್ಟೇ ಮುಂದುವರಿದಿದೆ ಎಂದರೂ ಹೆಣ್ಣುಮಕ್ಕಳು ಅದೇ ಒದ್ದಾಟದಲ್ಲಿದ್ದಾರೆ. ದೌರ್ಜನ್ಯದ ಅನುಪಾತ ನೋಡಿದರೆ ಇವತ್ತೂ ಹೆಣ್ಣುಮಕ್ಕಳು ನೋವು ಅನುಭವಿಸುತ್ತಿದ್ದಾರೆ. ಹಲವರು ಇದಕ್ಕೆ ಅಪವಾದ ಇರಬಹುದು. ಧಾರಾವಾಹಿ ಆಗಿರುವುದರಿಂದ ಒಂದಿಷ್ಟು ನಾಟಕ ಇರಲೇಬೇಕು. ಎಳೆದಾಡುತ್ತಾರೆ ಎನ್ನುವ ಆರೋಪವೂ ಇದೆ. ನಿಜ ಜೀವನವೂ ಅದೇ ಎಳೆದಾಟದಲ್ಲಿ ಸಾಗುತ್ತಿದೆ. ನಿಜ ಜೀವನದಲ್ಲೂ ಸಹಜೀವಗಳ ಜೊತೆ ಒಂದೇ ವಿಷಯಕ್ಕೆ ಜಗಳ ನಿರಂತರವಾಗಿ ನಡೆಯುತ್ತಿರುತ್ತದೆ. ತುಂಬ ಖುಷಿಯ ಕುಟುಂಬಗಳೂ ಇವೆ. ಆದರೂ ಒದ್ದಾಟ ಮಾತ್ರ ಇದ್ದೇ ಇದೆ. ಕಥೆಯಲ್ಲಿ ಮನರಂಜನೆಗೂ ಅವಕಾಶ ಇಲ್ಲ ಎಂದಲ್ಲ. ಕಾಮಿಡಿ ಪಾತ್ರಗಳೂ ಬರುತ್ತವೆ. ಖಳನಾಯಕಿಯ ಪಾತ್ರಗಳು ಹೀಗೆ ಇರಬಾರದು ಎನ್ನುವ ಆಶಯದಿಂದಲೇ ತನ್ನ ಕ್ರೌರ್ಯವನ್ನು ಬಿಂಬಿಸುತ್ತವೆ. ಹಬ್ಬ– ಮದುವೆಯ ಸಂಭ್ರಮವನ್ನು ಖುಷಿಯಾಗಿ ಮಾಡುತ್ತೇವೆ. ಸಿನಿಮಾ ರೀತಿಯಲ್ಲೇ ಖುಷಿ–ದುಃಖ ಎಲ್ಲ ಇರುತ್ತದೆ.

◆ **ಕನ್ಯಾದಾನದಲ್ಲಿ ನಿಮ್ಮ ಪಾತ್ರದ ಬಗ್ಗೆ ಹೇಳಿ.**

ಈಕೆ ಮುಗ್ಧ ಹೆಣ್ಣುಮಗಳು. ಸೋದರ ಮಾವನಿಗೆ ಮದುವೆ ಮಾಡಿರುತ್ತಾರೆ. ಆರ್ಥಿಕವಾಗಿ ತುಂಬ ಚೆನ್ನಾಗಿದ್ದ ಪತಿ ಇದ್ದಕ್ಕಿದ್ದಂತೆ ನಷ್ಟವನ್ನು ಅನುಭವಿಸಿ ಬೀದಿಗೆ ಬೀಳುತ್ತಾನೆ. ಅವನು ಇನ್ನೆಂದೂ ಉದ್ಧಾರ ಆಗಲ್ಲ ಎಂದೇ ಜನ ಆಡಿಕೊಳ್ಳುತ್ತಾರೆ. ಆದರೆ ಹೆಂಡತಿಯಾದ ನಾನು, ಆತ ಏನೇ ಮಾಡಿದರೂ ಬೆಂಬಲಿಸುತ್ತೇನೆ. ನಿನ್ನ ಗಂಡ ಸರಿ ಇಲ್ಲ ಎಂದು ಎಷ್ಟೇ ಜನ ದೂರಿದರೂ, ನಾವು ಚೆನ್ನಾಗಿಯೇ ಇದ್ದೇವೆ ನಮ್ಮ ಜಾತಕ ಸರಿ ಇಲ್ಲ ಎನ್ನುತ್ತಾ ಪ್ರೋತ್ಸಾಹಿಸುತ್ತೇನೆ. ದಕ್ಷಿಣ ಭಾರತೀಯ ಹೆಣ್ಣು ಸಾಮಾನ್ಯವಾಗಿ ತನ್ನ ಗಂಡನ ಪರವಾಗಿಯೇ ನಿಲ್ಲುತ್ತಾಳೆ. ನನಗೂ ನನ್ನ ಗಂಡನೇ ಗ್ರೇಟ್ ಎಂದು ಅಂಧಾಕಾರದಲ್ಲಿಯೇ ಹೋಗಳುತ್ತೇನೆ. ನಿಜವಾಗಿಯೂ ಅವನು ವಂಚಕ ಅಲ್ಲ. ಎಷ್ಟೇ ಕಷ್ಟಪಟ್ಟರು ಆತ ಮೋಸಕ್ಕೆ ಒಳಗಾಗುತ್ತಿದ್ದಾನೆ. ಈ ಪಾತ್ರವನ್ನು ಇತ್ತೀಚೆಗೆ ನಿರ್ವಹಿಸುತ್ತಿದ್ದೇನೆ. ಇನ್ನೂ ಪಾತ್ರದ ವಿಸ್ತಾರವನ್ನು ತಿಳಿಯಬೇಕು. ಒಟ್ಟಾರೆ, ಗಂಡನ ಬಗ್ಗೆ ಅಪಾರ ಪ್ರೀತಿ ಮತ್ತು ನಂಬಿಕೆ ಇದೆ.

◆ **ಟೀವಿಗೆ ಬಂದ ಮೇಲೆ ಮರೆಯಲಾರದ ಘಟನೆಗಳನ್ನು ಹೇಳಬಹುದಾ?**

ಖುಷಿಯನ್ನೂ ಸಂಭ್ರಮಿಸುವುದಿಲ್ಲ. ದುಃಖವನ್ನು ಜಾಸ್ತಿ ಎಳೆದುಕೊಳ್ಳುವುದಿಲ್ಲ. ವೀಕ್ಷಕರಿಗೆ ಶರ್ಮಿಳಾ ಯಾರು ಅಂತ ಗೊತ್ತಿರುವುದಿಲ್ಲ. ಸೀತೆ ಪಾತ್ರ ಖುಷಿ ಕೊಟ್ಟಿದೆ. ಅದು ನನ್ನ ಅದೃಷ್ಟ ಎಂದೇ ಭಾವಿಸುವೆ. ಆ ಪಾತ್ರ ಮಾಡುವಾಗ ತುಂಬ ಚಿಕ್ಕ ವಯಸ್ಸು. ಆ ಪಾತ್ರ ಮಾಡಿದರೆ ನಿಜ ಜೀವನದಲ್ಲೂ ಕಷ್ಟ ಅನುಭವಿಸಬೇಕಾಗುತ್ತದೆ ಎನ್ನುತ್ತಿದ್ದರು. ಆ ಪಾತ್ರ ಶರ್ಮಿಳಾ ಎನ್ನುವ ನಟಿಯನ್ನು ಆವಿಷ್ಕರಿಸಿದೆ ಅದನ್ನು ಮರೆಯಲು ಸಾಧ್ಯವೇ ಇಲ್ಲ.

■ **ರಾಘವೇಂದ್ರ ಕೆ.**